# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು - 572 103

ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719


ಸಂಖ್ಯೆ: ತುವಿ:ಕಾ.ಅ.ಪ.2020-21: 898 ದಿನಾಂಕ: 21.07.2020

## ಸುತ್ತೋಲೆ

**ವಿಷಯ:** ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಹೊಸ ಕಾಲೇಜುಗಳ ಪ್ರಾರಂಭ, ಸಂಯೋಜನೆ ಮುಂದುವರಿಕೆ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣ, ಪ್ರವೇಶ ಮಿತಿ ಹೆಚ್ಚಳ, ಹೊಸ ಕೋರ್ಸು ಪ್ರಾರಂಭ, ಇತ್ಯಾದಿಗಳ ಬಗ್ಗೆ ಆನ್-ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** 1) ಈ ಕಚೇರಿ ಸಂಯೋಜನಾ ಪ್ರಕಟಣೆ ಸಂಖ್ಯೆ: ತುವಿ:ಕಾ.ಅ.ಪ.2019-20/2223 ದಿ:27.08.2019

2) ಈ ಕಚೇರಿ ಸಂಯೋಜನಾ ಶುಲ್ಕದ ಅಧಿಸೂಚನೆ ಸಂಖ್ಯೆ: ತುವಿ:ಕಾ.ಅ.ಪ.ಸಂಯೋಜನೆ: 2019-20/2222 ದಿ:27.08.2019

3) ಸರ್ಕಾರದ ಆದೇಶ ಸಂಖ್ಯೆ:ಇಡಿ:34 ಇಜಿಒಎ2020 ದಿ:22.06.2020

4) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ : 21.07.2020

* * * * *

ತುಮಕೂರು ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಪ್ರಕಟಣೆಯ ಅನ್ವಯ 2020-21ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸ್ನಾತಕ / ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಣ, ಹೊಸ ಕೋರ್ಸು, ವಿಷಯ, ಭಾಷೆಗಳು, ವಿದ್ಯಾರ್ಥಿ ಪ್ರವೇಶ ಪ್ರಮಾಣದ ಹೆಚ್ಚಳ, ಕಾಲೇಜುಗಳ ಹೆಸರು ಬದಲಾವಣೆ, ಕಾಲೇಜಿನ ಸ್ಥಳ ಬದಲಾವಣೆ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣ ಹಾಗೂ ನೋಂದಾಯಿಸಲ್ಪಟ್ಟ ಶೈಕ್ಷಣಿಕ ಸಂಘ-ಸಂಸ್ಥೆಗಳು ಹೊಸ ಕಾಲೇಜನ್ನು ಪ್ರಾರಂಭಿಸಲು ಸಂಯೋಜನೆಗಾಗಿ ಈಗಾಗಲೇ ಮುದ್ರಿತ ರೂಪದಲ್ಲಿ ಅರ್ಜಿ ಸಲ್ಲಿಸಿರುವುದು ಸರಿಯಷ್ಟೆ.

ಉಲ್ಲೇಖ (3)ರಲ್ಲಿ ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರವು 2020-21ನೇ ಸಾಲಿಗೆ, ಹೊಸ ಕಾಲೇಜುಗಳ ಪ್ರಾರಂಭ, ಮುಂದುವರಿಕೆ (ವಾರ್ಷಿಕ ಸಂಯೋಜನೆ), ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣ, ಪ್ರವೇಶ ಮಿತಿ ಹೆಚ್ಚಳ, ಹೊಸ ಕೋರ್ಸುಗಳ ಪ್ರಾರಂಭ ಇತ್ಯಾದಿ ಸಂಯೋಜನೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಆದೇಶಿಸಿದ್ದು, ಈ ಸಂಬಂಧವಾಗಿ ಆನ್‌ಲೈನ್ ಮೂಲಕ ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳಿಗೆ ದಿನಾಂಕ 02.07.2020 ರಂದು ಆನ್‌ಲೈನ್ ಮುಖಾಂತರ ಸಂಯೋಜನೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಕುರಿತು ತರಬೇತಿ ನೀಡಲಾಗಿತ್ತು.

ಅದರಂತೆ ತರಬೇತಿ ಉದ್ದೇಶಕ್ಕಾಗಿ (training purposes) ಕೆಲವು ಸಂಯೋಜಿತ ಕಾಲೇಜುಗಳು ಆನ್-ಲೈನ್ ಮೂಲಕ ಸಂಯೋಜನೆ ಅರ್ಜಿಯನ್ನು ಸಲ್ಲಿಸಿರುತ್ತವೆ.

ಪ್ರಸ್ತುತ ಸರ್ಕಾರವು ಹೊಸ Portal ಮೂಲಕ 2020-21ನೇ ಶೈಕ್ಷಣಿಕ ಸಾಲಿಗೆ ಕಡ್ಡಾಯವಾಗಿ ಆನ್‌ಲೈನ್ ಮೂಲಕವೇ ಎಲ್ಲಾ ಸಂಯೋಜನಾ ಪ್ರಕ್ರಿಯೆಯನ್ನು ಕೈಗೊಳ್ಳಬೇಕೆಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಕಾಲೇಜುಗಳು ಈಗಾಗಲೇ 2020-21ನೇ ಸಾಲಿನ ಸಂಯೋಜನೆಗಾಗಿ ಸಲ್ಲಿಸಲಾದ ಅರ್ಜಿಯ ವಿವರ ಮತ್ತು ಸಂಬಂಧಪಟ್ಟ ದಾಖಲೆಗಳನ್ನು www.onlineaffiliation.karnataka.gov.in ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಲು ತಿಳಿಸಲಾಗಿದೆ.

ಉಲ್ಲೇಖ (2)ರ ಅಧಿಸೂಚನೆಯನ್ವಯ ವಿವಿಧ ರೀತಿಯ ಸಂಯೋಜನೆಗಾಗಿ ಕಾಲೇಜುಗಳು ಈಗಾಗಲೇ ವಿಶ್ವವಿದ್ಯಾನಿಲಯಕ್ಕೆ ಪಾವತಿಸಿರುವ ಶುಲ್ಕವನ್ನು ಪರಿಗಣಿಸಲಾಗುವುದು.

(ಪು.ತಿ.ನೋ)

ಪ್ರಸ್ತುತ ಯಾವುದೇ ಸಂಸ್ಥೆಗಳು ಹೊಸ ಕಾಲೇಜನ್ನು ಪ್ರಾರಂಭಿಸಲು, ಸಂಯೋಜನೆ ಮುಂದುವರಿಕೆ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣ, ಪ್ರವೇಶ ಮಿತಿ ಹೆಚ್ಚಳ, ಹೊಸ ಕೋರ್ಸು ಪ್ರಾರಂಭ, ಮುಂತಾದವುಗಳಿಗೆ ಅರ್ಜಿ ಸಲ್ಲಿಸಲು ಅಪೇಕ್ಷಿಸಿದಲ್ಲಿ ಉಲ್ಲೇಖ (2)ರನ್ವಯ ನಿಗದಿತ ಶುಲ್ಕ ಪಾವತಿಸಿ ಆನ್-ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

**ಗಮನಿಸಬೇಕಾದ ಅಂಶಗಳು**

1. ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ : 22.07.2020
2. ಹೊಸದಾಗಿ ಅರ್ಜಿ ಸಲ್ಲಿಸುವ ಕಾಲೇಜುಗಳು ಶುಲ್ಕ ಪಾವತಿಸುವ ಕೊನೆಯ ದಿನಾಂಕ : 30.07.2020
3. ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 05.08.2020
4. ಮುದ್ರಿತ ಪ್ರತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ : 07.08.2020

ಸಂಯೋಜನೆಯ ಅರ್ಜಿಯನ್ನು **www.onlineaffiliaiton.karnataka.gov.in** ನಲ್ಲಿ ಸಲ್ಲಿಸುವುದು.

ಕುಲಸಚಿವರು

ಗೆ,

1) ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2) ಪ್ರಾಂಶುಪಾಲರು, ಹೆಚ್.ಎಂ.ಎಸ್. ಪ್ರಥಮ ದರ್ಜೆ ಕಾಲೇಜು, ಹೆಚ್.ಎಂ.ಎಸ್. ಆವರಣ, ಶೆಟ್ಟಿಹಳ್ಳಿ ಮುಖ್ಯ ರಸ್ತೆ, ತುಮಕೂರು – 572103
3) ಪ್ರಾಂಶುಪಾಲರು, ಆರ್. ಮುದ್ದುರಂಗೇಗೌಡ ಪ್ರಥಮ ದರ್ಜೆ ಕಾಲೇಜು, ಗುರುಕುಲ ಬಡಾವಣೆ, ಜ್ಯೋತಿನಗರ, ಶಿರಾ – 572137
4) ಪ್ರಾಂಶುಪಾಲರು, ಗ್ಲೋಬಲ್ ಶಾಹೀನ್ ಕಾಲೇಜು, ಬಿ.ಹೆಚ್.ರಸ್ತೆ, ಭೀಮಸಂದ್ರ, ತುಮಕೂರು – 572107
5) ಪ್ರಾಂಶುಪಾಲರು, ಭಾರತಿ ಪ್ರಥಮ ದರ್ಜೆ ಕಾಲೇಜು, ಮರಳೂರು ಅಮ್ಮಾನಿಕೆರೆ ಎದುರು, ಕುಣಿಗಲ್ ರಸ್ತೆ, ತುಮಕೂರು – 572105
6) ಪ್ರಾಂಶುಪಾಲರು, ಎಸ್.ಬಿ.ಜಿ. ಪ್ರಥಮ ದರ್ಜೆ ಕಾಲೇಜು, ಮಾಯಸಂದ್ರ, ತುರುವೇಕೆರೆ ತಾಲ್ಲೂಕ್
7) ಪ್ರಾಂಶುಪಾಲರು, ಶ್ರೀ ರಾಘವೇಂದ್ರ ಪ್ರಥಮ ದರ್ಜೆ ಸಂಜೆ ಕಾಲೇಜು, ಡಾ. ರಾಧಾಕೃಷ್ಣ ರಸ್ತೆ, ಎಸ್.ಎಸ್.ಪುರಂ, ತುಮಕೂರು – 572102

ಪ್ರತಿಗಳು:

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560 001.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಯವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, - ವಿ.ವಿ ಯ ಅಂತರ್ಜಾಲದಲ್ಲಿ ಪ್ರಕಟಿಸುವುದು ಮತ್ತು e-mail ಮುಖಾಂತರ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಕಳುಹಿಸುವುದು.
4. ಕಛೇರಿ ಪ್ರತಿ.